ಸಹಕಾರ ಸಂಘಗಳ ಬಡ್ಡಿ ರಿಯಾಯಿತಿ

೯೫. ಶ್ರೀ ಬಸವಂತ್‌ರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಹಕಾರ ಸಂಘಗಳು ಸಾಲದ ಮೇಲೆ ವಿಧಿಸುವ ಬಡ್ಡಿ ದರದಲ್ಲಿ ಸರ್ಕಾರದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇಕಡ ೫ ರಷ್ಟು ರಿಯಾಯಿತಿ ಕೊಡುವುದೆಂದು ಘೋಷಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದು ಕಾರ್ಯರೂಪಕ್ಕೆ ಬರದಿರಲು ಕಾರಣಗಳೇನು?

ಇ) ಇದನ್ನು ಕಾರ್ಯರೂಪಕ್ಕೆ ತರಲಾಗುವುದೇ?

ಡಾ॥ ಹೆಚ್.ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

ಅ) ಸಣ್ಣ ವಂತ್ತು ಅತಿ ಸಣ್ಣ ರೈತರು ಪಡೆದುಕೊಂಡಿರುವ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿ ಸಹಾಯಧನ ಒದಗಿಸುವ ಒಂದು ಹೊಸ ಯೋಜನೆಯನ್ನು ೨೬-೧೦-೧೯೮೬ರಿಂದ ಜಾರಿಗೆ ಬರುವಂತೆ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

ಆ) ನಬಾರ್ಡ್ ಸಂಸ್ಥೆಯ ಸಲಹೆಯ ಹಿನ್ನೆಲೆಯಲ್ಲಿ ಯೋಜನೆ ತಯಾರಿಸಬೇಕಿದ್ದು ಸ್ವಲ್ಪ ವಿಳಂಬವಾಗಿರುತ್ತದೆ.

ಇ) ತರಲಾಗುವುದು

ಸಹಕಾರ ಸಂಘಗಳ ಸಾಲದ ಪುನರ್ ವ್ಯವಸ್ಥೆ

೯೫೪. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಂಗಾರಿ ಬಿತ್ತನೆಯು ಮುಗಿಯುತ್ತಾ ಬಂದರೂ ಈವರೆಗೂ ರೈತರಿಗೆ ಸಹಕಾರ ಸಂಘಗಳಿಂದ ಸಾಲ ಒದಗಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರೈತರಿಗೆ ಸಾಲ ದೊರಕಿಸಿಕೊಡಲು ತೆಗೆದುಕೊಂಡ ಕ್ರಮಗಳೇನು?

ಡಾ॥ ಹೆಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ರೈತರಿಗೆ ಸಾಲ ವಿತರಿಸಲಾಗುತ್ತಿದೆ.

ಮೃತಪಟ್ಟವರ ಭೂಮಿಯಂ ಪಟ್ಟಾ ವರ್ಗಾವಣೆ ಮಾಡದಿರುವ ಬಗ್ಗೆ

೯೫೫. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಕಂದಾಯ ನಿಲಾಖೆಯವರು ಮೃತಪಟ್ಟವರ ಭೂಮಿಯನ್ನು ೫, ೧೦ ವರ್ಷಗಳಿಂದ ಪಟ್ಟಾ ವರ್ಗಾವಣೆ ಮಾಡದೇ ಮತ್ತು ಮೃತಪಟ್ಟವರೇ ಸಾಗುವಳಿ ಮಾಡುತ್ತಿದ್ದಾರೆಂದು, ಪಹಣಿಯು ಸಾಗುವಳಿ ಕಾಲಂನಲ್ಲಿ ಬರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಪ್ರಕಾರ ತನ್ನ ಕಾರ್ಯಾಲಯದಲ್ಲಿಯೇ ಕುಳಿತು ಸಮೀಕ್ಷೆ ಮಾಡದೆ ಮೃತಪಟ್ಟವರೇ ಸಾಗುವಳಿ ಮಾಡುತ್ತಿದ್ದಾರೆಂದು ಬರೆದವರ ಮೇಲೆ ತೆಗೆದುಕೊಳ್ಳುವ ಕ್ರಮಗಳೇನು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಬಂದಲ್ಲಿ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.